ಓಎಸ್. ನಂ.171/2023

ಡಿ.ಡಬ್ಲ್ಯೂ: 1

**ದಿನಾಂಕಃ 16-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀಮತಿ ಎಸ್.ಎಂ.ಪಿ ವಕೀಲರಿಂದಃ**

ನನ್ನ ಅಜ್ಜ, ನನ್ನ ತಂದಗೆ ಬಾಯಿಮಾತಿನ ಮುಖಾಂತರ ಹಿಬಾ ಮಾಡುವ ಸಮಯದಲ್ಲಿ ನನ್ನ ವಯಸ್ಸು ಎಷ್ಟು ಇತ್ತು ಅಂತ ನನಗೆ ಗೊತ್ತಿರುವುದಿಲ್ಲ. ನನ್ನ ತಂದಗೆ ಬಾಯಿಮಾತಿನ ಮುಖಾಂತರ ಹಿಬಾ ಮಾಡಿಕೊಟ್ಟಿರುತ್ತಾರೆ, ನನ್ನ ತಂದೆ ವಯಸ್ಸು ಎಷ್ಟು ನಡೆಯುತ್ತಿದ್ದು ಎಂದು ನನಗೆ ವೈಯಕ್ತಿಕವಾಗಿ ಗೊತ್ತಿರುವುದಿಲ್ಲ. ನನ್ನ ಅಜ್ಜನು ಇಂತಹಃ ದಿನ ನನ್ನ ತಂದೆಗೆ ಹಿಬಾ ಮುಖಾಂತರ ಕೊಟ್ಟನು ಕಲಂ. ನಂ.10, 11 ರಲ್ಲಿ ನಮೂದಿಸಿದ ಬಗ್ಗೆ ಗೊತ್ತಿದಿಯಾ ಅಂತ ಕೇಳಲು ನನ್ನ ತಂದೆ ಹೇಳುತ್ತಿದ್ದರು ಅಂತ ನುಡಿಯುತ್ತಾರೆ. ಬಾಯಿಮಾತಿನ ಮುಖಾಂತರ ಹಿಬಾ ಕೊಡುವ ಈ ಹಿಂದೆ ಹೇಳಿದ ಇಬ್ಬರೂ ವ್ಯಕ್ತಿಗಳು ಹಾಜರು ಇದ್ದರು ಎನ್ನುವ ಬಗ್ಗೆ ನನ್ನ ತಂದೆ ಹೇಳುತ್ತಿದ್ದರು, ಆದರೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ. ಸದರಿ 2 ಸಾಕ್ಷಿದಾರರ ಪೈಕಿ ಒಟ್ಟು ಸಾಕ್ಷಿದಾರರ ತೀರಿಕೊಂಡಿದ್ದು, ಇನ್ನೊಬ್ಬ ಸಾಕ್ಷಿ ಪಾರ್ಶವಾಯುವಾಗಿ ಮಹರಾಷ್ಟ್ರದಲ್ಲಿ ಇರುತ್ತಾನೆ. ಆ ರೀತಿ ಪಾರ್ಶವಾಯುವಾಗಿರುವುದಿಲ್ಲ ಮತ್ತು ಮಹರಾಷ್ಟ್ರದಲಿ ಸಹ ಇರುವುದಿಲ್ಲ, ಆತನ ಊರಾದ ಬನ್ನಟ್ಟಿಯಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ. ನನ್ನ ಅಜ್ಜ ನನ್ನ ತಂದೆಯ ಹೆಸರಿನಲ್ಲಿ ಖಾತ ಬದಲಾವಣೆ ಮಾಡಿದ ಬಗ್ಗೆ ದಾಖಲೆಗಳು ಇಲ್ಲದೇ ಇರುವುದರಿಂದ ಈಗ ನಾನು ನನ್ನ ಅಜ್ಜ ಹಿಬಾ ಮಾಡಿರುತ್ತಾನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಸದರಿ ಆಸ್ತಿ ಕೊಡಬಾದು ಎನ್ನುವ ಉದ್ದೇಶದಿಂದ ರಂಜಾನ್ ದಿನ ಹಿಬಾ ಕೊಟ್ಟಿರುತ್ತಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಮೇಲೆ ಹೇಳಿದ ಸಾಕ್ಷಿದಾರರ ಸಮಕ್ಷಮ ಹಿಬಾ ಕೊಟ್ಟಿರುತ್ತಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತನು ನ್ಯಾಯಾಲಯಕ್ಕೆ ಬಂದರೆ ಸತ್ಯ ಗೊತ್ತಾಗುತ್ತದೆ ಅಂತ ಆತನಿಗೆ ಪಾರ್ಶುವಾಯು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಆಸ್ತಿ ಕೊಡಬಾರದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,

ಶೋರಾಪುರ.